# ಆ್ಯಕ್ಟ್ ಟೆಲಿವಿಷನ್‌ನಿಂದ 'ಕೇಬಲ್ ವಾರ್ತೆ ಟೆಲಿ ಪ್ರಶಸ್ತಿ' ಪ್ರದಾನ

ಬೆಂಗಳೂರು, ಏ. 12: ಆ್ಯಕ್ಟ್ ಟೆಲಿವಿಷನ್ ಸಂಸ್ಥೆಯು ಕೇಬಲ್ ಟಿ.ವಿ.ಯಲ್ಲಿ ಗಮನಾರ್ಹ ಸಾಧನೆ ಸಲ್ಲಿಸಿದ ಎಚ್.ಎಂ.ಕೆ. ಮೂರ್ತಿ, ಸಿಹಿಕಹಿ ಚಂದ್ರು, ಎಂ.ಎಸ್. ನರಸಿಂಹ ಮೂರ್ತಿ, ಅಪರ್ಣಾ ಅವರಿಗೆ ಜೀವಿತಾವಧಿ ಸಾಧನೆಗಾಗಿ ಕೇಬಲ್ ವಾರ್ತೆ ಟೆಲಿ ಪ್ರಶಸ್ತಿ ನೀಡಿ ಸನ್ಮಾನಿಸಿತು.



ಬೆಂಗಳೂರಿನಲ್ಲಿ ಭಾನುವಾರ ನಡೆದ ಕೇಬಲ್ ವಾರ್ತೆ ಟೆಲಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಿರುತೆರೆಯ ಕಲಾವಿದರು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ಇಂದು ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ಜಗದೀಶ್ ಶೆಟ್ಟರ್, ಕಲಾವಿದರು, ಸಂಭಾಷಣೆಕಾರರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಮಣಿಪಾಲ್ ಮೀಡಿಯಾ ನೆಟ್‌ವರ್ಕ್ ನಿರ್ಮಾಣದ ಜನಪ್ರಿಯ ಧಾರಾವಾಹಿ 'ಗುಪ್ತಗಾಮಿನಿ'ಯ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್‌ರಿಗೆ ಅತ್ಯುತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿಯನ್ನು ಹಾಗೂ ಕಿರುತೆರೆ ನಟ ರವಿಕಿರಣ್‌ರಿಗೆ ಎವರ್‌ಗ್ರೀನ್ ಪ್ರಶಸ್ತಿಯನ್ನು ನೀಡಲಾಯಿತು.

**ವಾರ್ತಾ ಪ್ರಶಸ್ತಿ:** ಅತ್ಯುತ್ತಮ ಕೇಬಲ್ ವಾರ್ತೆ ಪ್ರಶಸ್ತಿಯನ್ನು ಈ ಟಿವಿಯ ಸುರೇಂದ್ರನಾಥ್, ಉದಯ ಟಿ.ವಿ.ಯ ವ್ಯವಸ್ಥಾಪಕ ನಿರ್ದೇಶಕ ವಿಜಯಕುಮಾರ್, ಆಳ್ವ ಬ್ರದರ್ಸ್ ಮೆಡಿಟೆಕ್‌ನ ನಿವೇದಿತ್ ಆಳ್ವ, ಬಾಂಗ್ಲಾದೇಶದ ಎನ್‌ಟಿವಿ ಮುಖ್ಯಸ್ಥ ಕನ್ನಡಿಗ ಅನಿಲ್ ಶೆಟ್ಟಿ ಅವರಿಗೆ ಪ್ರದಾನ ಮಾಡಲಾಯಿತು.

ಶ್ರೇಷ್ಠ ಸಂಭಾಷಣೆಕಾರ ಪ್ರಶಸ್ತಿಯನ್ನು ಪಾಯಿಂಟ್ ಪರಿಮಳ ಧಾರಾವಾಹಿಗಾಗಿ ಎಂ.ಎಸ್. ನರಸಿಂಹಮೂರ್ತಿ, ಶ್ರೇಷ್ಠ ಸಂಕಲನಕಾರ ಪ್ರಶಸ್ತಿಯನ್ನು ಸರಿಗಮಪ ಧಾರಾವಾಹಿಯ ಸಂಕಲನಕಾರ ಬಾಲರಾಜ್ ಅವರಿಗೆ ನಿರ್ಮಾಪಕ ಕೆ.ಸಿ.ಎನ್. ಚಂದ್ರಶೇಖರ್ ಪ್ರದಾನ ಮಾಡಿದರು.

ಚಿತ್ರನಟ ಪ್ರಿಯಾಂಕ ಉಪೇಂದ್ರ, ಶ್ರೇಷ್ಠ ಛಾಯಾಗ್ರಾಹಕ ಪ್ರಶಸ್ತಿಯನ್ನು ನಾಕುತಂತಿ ಧಾರಾವಾಹಿಗಾಗಿ ಸಿ.ಡಿ. ರಾಜು ಅವರಿಗೆ ಪ್ರದಾನ ಮಾಡಿದರು. ಹಿರಿಯನಟಿ ಹೇಮಾಚೌಧುರಿ ಅವರು ಶ್ರೇಷ್ಠ ವಸ್ತ್ರವಿನ್ಯಾಸಕ ಪ್ರಶಸ್ತಿಯನ್ನು ಮಣ್ಣಿನ ಋಣ ಧಾರಾವಾಹಿಯ ಡಿ.ಸಿ. ವೀರೇಂದ್ರ ಅವರಿಗೆ ನೀಡಿದರು.

ನಿರ್ಮಾಪಕ ಎಸ್.ಎ. ಚಿನ್ನೇಗೌಡ ಅವರು, ಶ್ರೇಷ್ಠ ಪ್ರಸಾದನ ಪ್ರಶಸ್ತಿಯನ್ನು ಶಿವಲೀಲಾಮೃತ ಧಾರಾವಾಹಿಯ ಡೇನಿಯಲ್ ಅವರಿಗೆ ಹಾಗೂ ಶ್ರೇಷ್ಠ ನಿರ್ಮಾಣ ಸಂಸ್ಥೆ ಪ್ರಶಸ್ತಿಯನ್ನು ಮೀಡಿಯಾ ಹೌಸ್‌ನ ಶೈಲಜಾನಾಗ್ ಹಾಗೂ ಶಿವಕುಮಾರ್‌ರಿಗೆ ಪ್ರದಾನ ಮಾಡಿದರು.

ಆ್ಯಕ್ಟ್ ಟೆಲಿವಿಷನ್' ಸಂಸ್ಥೆ ಇದೇ ಮೊದಲ ಬಾರಿಗೆ ಕೇಬಲ್ ಟಿ.ವಿ. ಹಾಗೂ ಪ್ರಸಾರ ಮಾಧ್ಯಮದಲ್ಲಿ ಅಪಾರ ಸೇವೆ ಸಲ್ಲಿಸಿರುವವರನ್ನು ಗುರುತಿಸಿ ಪ್ರಶಸ್ತಿ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. ತೀರ್ಪುಗಾರರಾಗಿ ವಿಧಾನ ಪರಿಷತ್ ಸದಸ್ಯ ದೊಡ್ಡರಂಗೇಗೌಡ, ಅನಂತ ಚಿನಿವಾರ್, ಸಬ್ಬಿಕೆರೆ ವೆಂಕಟೇಶ್ ಕಾರ್ಯ ನಿರ್ವಹಿಸಿದ್ದರು. ಪ್ರಶಸ್ತಿ ಪ್ರದಾನ ಸಮಾರಂಭದ ಅಂಗವಾಗಿ ಗಾಯಕ ರಘು ದೀಕ್ಷಿತ್‌ರಿಂದ ಗಾಯನ, ಲೂಟ್ ವಿಜಯ್ ಸ್ಟುಡಿಯೋ ತಂಡದ ನೃತ್ಯ, ಮಾನಸಿ-ಕಿರಣ್ ತಂಡದಿಂದ ಜೈಹೋ ನೃತ್ಯ ಪ್ರದರ್ಶನ ನಡೆಯಿತು.